ಒಂದನೇ ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಲಯದಲ್ಲಿ ಸಾಗರ.

ಸಿ.ಸಿ. ನಂ. 1990/2025

ಫಿರ್ಯಾದುದಾರರು ಸಾಗರ ಗ್ರಾಮಾಂತರ ಪೊಲೀಸ್.

ವಿರುದ್ಧ

ಆರೋಪಿತರುಃ- ಎ 1. ಸಸರವಳ್ಳಿ ಈಶ್ವರ ಬಿನ್ ದ್ಯಾವಪ್ಪ.
ಎ 2. ಕಲ್ಯಾಣಿ ದೇವರಾಜ ಬಿನ್ ಅಣ್ಣಪ್ಪ.
ಎ 3. ಸಂದೀಪ ಬಿನ್ ಪರಶುರಾಮ.
ಎ 4. ತರಕಾರಿ ನಾರಾಯಣ ಬಿನ್ ಚೌಡಪ್ಪ.
ಎ 5. ಮುತ್ತಣ್ಣ ಪರಶುರಾಮ ಬಿನ್ ಪಾಪಣ್ಣ.
ಎ 6. ಕೋಣೆ ಪ್ರಭಾಕರ ಬಿನ್ ನಾರಾಯಣಪ್ಪ.
ಎ 7. ಸತೀಶ್ ಸಾಲಗೇರಿ ಬಿನ್ ನಾರಾಯಣ.
ಎ 8. ಮುತ್ತನ್ ಸುಭಾಷ್ ಬಿನ್ ಕನ್ನಪ್ಪ.
ಎ 9. ಕಿರಣ ಬಿನ್ ಕೆರಿಯಪ್ಪ.
ಎ 10. ಹೊಂಗೆಕೇರಿ ರಾಜು ಬಿನ್ ಹುಚ್ಚಪ್ಪ.
ಎ 11. ಮೂಕ ನಾರಾಯಣ ಬಿನ್ ಬೀರಪ್ಪ.
ಎ 12. ಮಡಿವಾಳ ಭಾಸ್ಕರ ಬಿನ್ ಬುಡಪ್ಪ.

1 ನೇ ಆರೋಪಿತನ ಹೆಸರು - ಸಸರವಳ್ಳಿ ಈಶ್ವರ.
ತಂದೆಯ ಹೆಸರು - ದ್ಯಾವಪ್ಪ.
ವಯಸ್ಸುಃ - 38 ವರ್ಷ,
ಉದ್ಯೋಗ - ವ್ಯವಸಾಯ.

2 ನೇ ಆರೋಪಿತನ ಹೆಸರು - ಕಲಾಣಿ ದೇವರಾಜ
ತಂದೆಯ ಹೆಸರು - ಅಣ್ಣಪ್ಪ
ವಯಸ್ಸುಃ - 35 ವರ್ಷ,
ಉದ್ಯೋಗ - ವ್ಯವಸಾಯ.

3 ನೇ ಆರೋಪಿತನ ಹೆಸರು - ಸಂದೀಪ.
ತಂದೆಯ ಹೆಸರು - ಪರಶುರಾಮ.
ವಯಸ್ಸುಃ - 39 ವರ್ಷ,
ಉದ್ಯೋಗ - ವ್ಯವಸಾಯ.

4 ನೇ ಆರೋಪಿತನ ಹೆಸರು - ತರಕಾರಿ ನಾರಾಯಣ.
ತಂದೆಯ ಹೆಸರು - ಚೌಡಪ್ಪ.
ವಯಸ್ಸುಃ - 45 ವರ್ಷ,
ಉದ್ಯೋಗ - ವ್ಯವಸಾಯ.

| | | |
|---|---|---|
| 5 ನೇ ಆರೋಪಿತನ ಹೆಸರು | - | ಮುತ್ತಣ್ಣ ಪರಶುರಾಮ. |
| ತಂದೆಯ ಹೆಸರು | - | ಪಾಪಣ್ಣ. |
| ವಯಸ್ಸುಃ | - | 37 ವರ್ಷ, |
| ಉದ್ಯೋಗ | - | ವ್ಯವಸಾಯ. |
| 6 ನೇ ಆರೋಪಿತನ ಹೆಸರು | - | ಕೋಣೆ ಪ್ರಭಾಕರ. |
| ತಂದೆಯ ಹೆಸರು | - | ನಾರಾಯಣಪ್ಪ. |
| ವಯಸ್ಸುಃ | - | 30 ವರ್ಷ, |
| ಉದ್ಯೋಗ | - | ವ್ಯವಸಾಯ. |
| 7 ನೇ ಆರೋಪಿತನ ಹೆಸರು | - | ಸತೀಶ್ ಸಾಲಗೇರಿ. |
| ತಂದೆಯ ಹೆಸರು | - | ನಾರಾಯಣ |
| ವಯಸ್ಸುಃ | - | 36 ವರ್ಷ, |
| ಉದ್ಯೋಗ | - | ವ್ಯವಸಾಯ. |
| 8 ನೇ ಆರೋಪಿತನ ಹೆಸರು | - | ಮುತ್ತನ್ ಸುಭಾಷ್. |
| ತಂದೆಯ ಹೆಸರು | - | ಕನ್ನಪ್ಪ. |
| ವಯಸ್ಸುಃ | - | 35 ವರ್ಷ, |
| ಉದ್ಯೋಗ | - | ವ್ಯವಸಾಯ. |
| 9 ನೇ ಆರೋಪಿತನ ಹೆಸರು | - | ಕಿರಣ. |
| ತಂದೆಯ ಹೆಸರು | - | ಕೆರಿಯಪ್ಪ |
| ವಯಸ್ಸುಃ | - | 28 ವರ್ಷ, |
| ಉದ್ಯೋಗ | - | ವ್ಯವಸಾಯ. |
| 10 ನೇ ಆರೋಪಿತನ ಹೆಸರು | - | ಹೊಂಗೆಕೇರಿ ರಾಜು. |
| ತಂದೆಯ ಹೆಸರು | - | ಹುಚ್ಚಪ್ಪ. |
| ವಯಸ್ಸುಃ | - | 31 ವರ್ಷ, |
| ಉದ್ಯೋಗ | - | ವ್ಯವಸಾಯ. |
| 11 ನೇ ಆರೋಪಿತನ ಹೆಸರು | - | ಮೂಕ ನಾರಾಯಣ. |
| ತಂದೆಯ ಹೆಸರು | - | ಬೀರಪ್ಪ. |
| ವಯಸ್ಸುಃ | - | 43 ವರ್ಷ, |
| ಉದ್ಯೋಗ | - | ವ್ಯವಸಾಯ. |
| 12 ನೇ ಆರೋಪಿತನ ಹೆಸರು | - | ಮಡಿವಾಳ ಭಾಸ್ಕರ. |
| ತಂದೆಯ ಹೆಸರು | - | ಬುಡಪ್ಪ. |
| ವಯಸ್ಸುಃ | - | 38 ವರ್ಷ, |
| ಉದ್ಯೋಗ | - | ವ್ಯವಸಾಯ. |
| ವಾಸ | - | ಆರೋಪಿತರೆಲ್ಲರೂ,<br>ಕಾಗೋಡು ಗ್ರಾಮ ವಾಸ,<br>ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ. |

# ದೋಷಾರೋಪಣೆ

ಸಾಗರದ ಒಂದನೇ ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಧೀಶರಾದ ದೀಪ ಕೆ.ಆರ್., ಬಿ.ಎ.ಎಲ್. ಎಲ್‌ಎಲ್.ಬಿ., ಆದ ನಾನು ನಿಮ್ಮ ಮೇಲೆ ಈ ಕೆಳಕಂಡಂತೆ ಆರೋಪಣೆ ಹೊರಿಸುತ್ತೇನೆ.

ದಿನಾಂಕಃ *4/09/2022* ರಂದು ಸಂಜೆ *05-00* ಗಂಟೆ ಸಮಯದಲ್ಲಿ ಸಾಗರ ತಾಲ್ಲೂಕು ಮಸೂರು ಗ್ರಾಮ ಪಂಚಾಯ್ತಿಯ ಸರ್ವೇ ನಂ. *127* ರ ಸರ್ಕಾರಿ ಬೀಳು ಜಾಗದಲ್ಲಿ ಚಾಸಾ-*01* ರವರು ಸುಮಾರು *400* ಅಡಿಕೆ ಸಸಿಯ ಅಡಿಕೆ ಬೆಳೆ ಹಾಗೂ ಶುಂಠಿ ಬೆಳೆಯನ್ನು ಮಾಡಿಕೊಂಡಿದ್ದು ಹಾಗೂ ಚಾಸಾ-*02* ರವರಾದ ಮಂಜಪ್ಪನವರ ಸದರಿ ಜಾಗದಲ್ಲಿ ಸುಮಾರು *800* ಆಡಕೆ ಸಸಿಗಳನ್ನು ಹಾಗೂ ಶೆಂಗಾ ಬೆಳೆಯನ್ನು *1.1/2* ಎಕ್ರೆ ಜಾಗದಲ್ಲಿ ಮಾಡಿಕೊಂಡಿದ್ದು ಚಾಸಾ-*03* ರವರಾದ ಜಯಂತ ರವರು *1* ಎಕರೆ ಜಾಗದಲ್ಲಿ ಸುಮಾರು *400* ಅಡಿಕೆ ಸಸಿಗಳನ್ನು ನೆಟ್ಟು ಬೆಳೆಮಾಡಿಕೊಂಡಿದ್ದು, ಚಾಸಾ-*04* ರವರಾದ ಮಧುಚಂದ್ರ ರವರು ಈ ಸರ್ಕಾರಿ ಜಾಗದಲ್ಲಿ ಸುಮಾರು *2000* ಅಷ್ಟು ಅನಾನಸ್ ಬೆಳೆಯನ್ನು ಮಾಡಿಕೊಂಡಿದ್ದು, ಸದರಿ ಬೆಳೆಗೆ ಮಾಡಿಕೊಂಡಿದ್ದು *1* ರಿಂದ *14* ನೇ ಆರೋಪಿತರಾದ ನೀವುಗಳು ಏಕ ಉದ್ದೇಶದಿಂದ ಸದರಿ ಸರ್ಕಾರಿ ಜಮೀನನ್ನು ಒತ್ತುವರಿಗೆ ಪ್ರಯತ್ನಿಸಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ *143,144,147* ಸಹವಾಚಕ ಕಲಂ *149* ರಡಿಯಲ್ಲಿ ಅಪರಾಧವೆಸಗಿದ್ದು, ಇದು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಇದೆ.

ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಮೇಲ್ಕಂಡ ವಿಷಯವಾಗಿ ಆರೋಪಿತರಾದ ನೀವುಗಳು ಏಕ ಉದ್ದೇಶದಿಂದ ಬೆಳೆ ನಷ್ಟ ಹಾಗೂ ವೈಪ್ ಲೈನ್ ಹಾಳು ಮಾಡುತ್ತಿರುವಾಗ ಚಾಸಾ-*01* ರವರು ಆರೋಪಿಗಳಿಗೆ ಒತ್ತುವರಿ ಮಾಡದಂತೆ ತಡೆಯಲು ಹೋಗಿ ಯಾಕೆ ಹೀಗೆ ಮಾಡುತ್ತೀರಾ ಎಂದು ಚಾಸಾ-*01* ರವರು ವಿಚಾರಿಸಲು ಹೋದಾಗ ಆರೋಪಿತರಾದ ನೀವುಗಳು ಚಾಸಾ-*01* ರವರಿಗೆ ಜಮೀನು ನಿಂದಾ ಅಂತಾ ಅವಾಚ್ಯ ಶಬ್ಧಗಳಿಂದ ಬೈದು ಸಾರ್ವಜನಿಕ ನೆಮ್ಮದಿಗೆ ಭಂಗವನ್ನುಂಟು ಮಾಡಿದ್ದು, ಆ ಮೂಲಕ ನೀವುಗಳು ಭಾರತೀಯ ದಂಡ ಸಂಹಿತೆ ಕಲಂ *504* ಸಹವಾಚಕ ಕಲಂ *149* ರಡಿಯಲ್ಲಿ ಅಪರಾಧವೆಸಗಿದ್ದು, ಇದು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಇದೆ.

ಮೂರನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಮೇಲ್ಕಂಡ ವಿಷಯವಾಗಿ ಕೇಳಲು ಹೋದ ಚಾಸಾ-*01* ರವರನ್ನು ಇದು ಸರ್ಕಾರಿ

ಜಮೀನು ನೀನು ಯಾರು ಕೇಳಲಿಕ್ಕೆ ಎಂದು ಆರೋಪಿಗಳಾದ ನೀವುಗಳು ಏಕ ಉದ್ದೇಶದಿಂದ ಚಾಸಾ-*01* ರವರನ್ನು ಕಾಲಿನಿಂದ ತುಳಿದು, ಹಲ್ಲೆ ಮಾಡಿ ಸಾಮಾನ್ಯ ಸ್ವರುಪದ ನೋವುಂಟು ಮಾಡಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ *323* ಸಹವಾಚಕ ಕಲಂ *149* ರಡಿಯಲ್ಲಿ ಅಪರಾಧವೆಸಗಿದ್ದು, ಇದು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಇದೆ.

ನಾಲ್ಕನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಮೇಲ್ಕಂಡ ವಿಷಯವಾಗಿ ಆರೋಪಿತರಾದ ನೀವುಗಳು ಏಕ ಉದ್ದೇಶದಿಂದ ಚಾಸಾ-*01* ರವನ್ನು ನಮ್ಮನ್ನು ತಡೆಯಲು ಬಂದರೆ ನಿನ್ನನ್ನು ಹಾಗೂ ನಿನ್ನ ಕುಟುಂಬವನ್ನು ಎಲ್ಲರೂ ಸೇರಿ ಕೊಲೆ ಮಾಡುತ್ತೇವೆ ಎಂದು ಕತ್ತಿಯನ್ನು ತೋರಿಸಿ ಬೆದರಿಕೆ ಹಾಕಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ *506* ಸಹವಾಚಕ ಕಲಂ *149* ರಡಿಯಲ್ಲಿ ಅಪರಾಧವೆಸಗಿದ್ದು, ಇದು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಇದೆ.

ಕೊನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಮೇಲ್ಕಂಡ ವಿಷಯವಾಗಿ ಆರೋಪಿತರಾದ ನೀವುಗಳು ಏಕ ಉದ್ದೇಶದಿಂದ ಚಾಸಾ-*01* ರವರ ಅಡಿಕೆ ಮತ್ತು ಶುಂಠಿ ಬೆಳೆ ನಷ್ಟ ಹಾಗೂ ಪೈಪ್ ಲೈನ್ ನಷ್ಟ ***70.000*** ರೂ ನಷ್ಟ ಉಂಟು ಮಾಡಿರುವುದು ಚಾಸಾ-***02*** ರವರ ಅಡಿಕೆ ಬೆಳೆ ಹಾಗೂ ಪೈಪ್ ಲೈನ್ ನಷ್ಟ ***70.000*** ರೂ ನಷ್ಟ ಉಂಟು ಮಾಡಿರುವುದು ಚಾಸಾ-***03*** ರವರ ಅಡಿಕೆ ಬೆಳೆ ನಷ್ಟ ಹಾಗೂ ಪೈಪ್ ಲೈನ್ ನಷ್ಟ ***40.000*** ಅಷ್ಟು ನಷ್ಟ ಉಯ ಮಾಡಿರುವುದು, ಚಾಸಾ-***04*** ರವರ ಅನಾನಸ್ ಬೆಳೆಯ ನಷ್ಟ ಹಾಗೂ ಪೈಪ್ ಲೈನ್ ನಷ್ಟ ***60.000*** ರೂ. ನಷ್ಟು ನಷ್ಟ ಉಂಟು ಮಾಡಿರುವುದು ಉಂಟು ಒಟ್ಟು ***2,40,000*** ರೂ. ನಷ್ಟು ನಷ್ಟ ಉಂಟು ಮಾಡಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ *427* ಸಹವಾಚಕ ಕಲಂ *149* ರಡಿಯಲ್ಲಿ ಅಪರಾಧವೆಸಗಿದ್ದು, ಇದು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಇದೆ.

ಆದ್ದರಿಂದ ಆರೋಪಿಗಳಾದ ನಿಮ್ಮ ಮೇಲೆ ಮುಂದಿನ ಕೇಸು ನಡೆಸುವಂತೆ ನಿರ್ದೇಶಿಸಿದೆ.

ದಿನಾಂಕಃ 18.12.2025

(ದೀಪ ಕೆ.ಆರ್.)
1 ನೇ ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಸಾಗರ.